**<u>ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ರವರ ನ್ಯಾಯಾಲಯ, ನಂಜನಗೂಡು</u>**

**<u>ಸಿಸಿ ಸಂಖ್ಯೆ: 198/2021</u>**

**ಫಿರ್ಯಾದುದಾರರು** : ಸರ್ಕಾರದ ಪರವಾಗಿ ಆರಕ್ಷಕ ಉಪ-ನಿರೀಕ್ಷಕರು,
ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆ,
ನಂಜನಗೂಡು.

ವಿರುದ್ಧ

**ಆರೋಪಿಗಳು** : ಶ್ರೀ.ಸಿದ್ದರಾಜು ಮತ್ತು ಇತರರು

**:: <u>ದೋಷಾರೋಪಣೆ</u> ::**

**ಶ್ರೀ ಸತೀಶ ಕೆ.ಜಿ., ಬಿ.ಎ., ಎಲ್.ಎಲ್.ಬಿ.,** ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ. ನಂಜನಗೂಡು ಆದ ನಾನು ಆರೋಪಿಗಳಾದ-

1) ಶ್ರೀ.ಸಿದ್ದರಾಜು ಬಿನ್ ಮಾದಶೆಟ್ಟಿ
ವಯಸ್ಸು ಸುಮಾರು 46 ವರ್ಷ,

2) ಶ್ರೀ.ಸಿದ್ದರಾಜು ಬಿನ್ ಸಿದ್ದಶೆಟ್ಟಿ
ವಯಸ್ಸು ಸುಮಾರು 46 ವರ್ಷ,

3) ಶ್ರೀ.ಮಹದೇವಶೆಟ್ಟಿ ಉಃ ಬೆಳ್ಳಿ ಬಿನ್ ಮಾದಶೆಟ್ಟಿ
ವಯಸ್ಸು ಸುಮಾರು 65 ವರ್ಷ,

4) ಶ್ರೀ.ಮಹೇಶ ಉಃ ಕುಂಡಪ್ಪ ಬಿನ್ ಸಿದ್ದರಾಜು
ವಯಸ್ಸು ಸುಮಾರು 38 ವರ್ಷ,

5) ಶ್ರೀ.ಗೋಪಾಲಯ್ಯ ಬಿನ್ ಲೇಟ್ ಸಿದ್ದಯ್ಯ
ವಯಸ್ಸು ಸುಮಾರು 65 ವರ್ಷ,

7) ಶ್ರೀಮತಿ.ಶಶಿ ಕೋಂ ಮಹೇಶ ಉಃ ಕುಂಡಪ್ಪ
ವಯಸ್ಸು ಸುಮಾರು 25 ವರ್ಷ,

8) ಶ್ರೀಮತಿ.ಸಾಕಮ್ಮ ಕೋಂ ಗುರುಸಿದ್ದಶೆಟ್ಟಿ
ವಯಸ್ಸು ಸುಮಾರು 55 ವರ್ಷ,

9) ಶ್ರೀಮತಿ.ದೊಡ್ಡಮ್ಮ ಕೋಂ ಸಿದ್ದಪ್ಪ
ವಯಸ್ಸು ಸುಮಾರು 40 ವರ್ಷ,

10) ಶ್ರೀಮತಿ.ಮಹದೇವಮ್ಮ ಕೋಂ ಮಾದಶೆಟ್ಟಿ

ವಯಸ್ಸು ಸುಮಾರು 58 ವರ್ಷ,

11) ಶ್ರೀ.ಮಾದಶೆಟ್ಟಿ ಬಿನ್ ಲೇಟ್ ಮಾದಶೆಟ್ಟಿ
ವಯಸ್ಸು ಸುಮಾರು 46 ವರ್ಷ,

12) ಶ್ರೀ.ನಾಗೇಂದ್ರ ಬಿನ್ ಚೆನ್ನಯ್ಯ
ವಯಸ್ಸು ಸುಮಾರು 47 ವರ್ಷ,

13) ಶ್ರೀ.ಮಹದೇವಸ್ವಾಮಿ ಬಿನ್ ಲೇಟ್ ಮಾದೇಗೌಡ
ವಯಸ್ಸು ಸುಮಾರು 48 ವರ್ಷ,

14) ಶ್ರೀ.ಚಿಕ್ಕಸಿದ್ದಶೆಟ್ಟಿ – **ಮರಣ ಹೊಂದಿರುತ್ತಾರೆ.**
(**Abated**)

15) ಶ್ರೀ.ಸಿದ್ದನಾಯಕ ಬಿನ್ ಲೇಟ್ ಮಾದನಾಯಕ
ವಯಸ್ಸು ಸುಮಾರು 60 ವರ್ಷ,

ನಂಜನಗೂಡು ತಾಲ್ಲೂಕಿನ ಹುಣಸನಾಳು ಗ್ರಾಮದ ನಿವಾಸಿಗಳಾದ ನಿಮ್ಮ ಮೇಲೆ ಮಾಡುವ ದೋಷಾರೋಪಣೆ ಏನೆಂದರೆಃ–

ಮೊದಲನೆಯದಾಗಿ ದಿನಾಂಕ 08.02.2020 ರಂದು ಬೆಳಿಗ್ಗೆ 11:30 ಗಂಟೆ ಸಮಯದಲ್ಲಿ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಹುಣಸನಾಳು ಗ್ರಾಮದಲ್ಲಿರುವ ಸರ್ವೆ ನಂಬರ್–213 ರಲ್ಲಿ ತೆರೆಯಲು ಉದ್ದೇಶಿಸಿರುವ ಮದ್ಯದ ಅಂಗಡಿ ಬಳಿ ಆರೋಪಿಗಳಾದ ನೀವು 6 ಮತ್ತು ಮೃತ 14 ನೇ ಆರೋಪಿಯೊಂದಿಗೆ ಸೇರಿ ಏಕೋದ್ದೇಶದಿಂದ 11 ನೇ ಆರೋಪಿಯಾದ ನಿಮ್ಮ ನೇತೃತ್ವದಲ್ಲಿ ಚಾಸಾ–6– ಶ್ರೀ.ರಾಜಶೇಖರ ರವರ ಜೊತೆ ಜಗಳ ಮಾಡಲು ಅಕ್ರಮ ಕೂಟ ಸೇರಿಕೊಂಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 143 ಸಹವಾಚಕ 149 ರಂತೆ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಎರಡನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು 6 ಮತ್ತು ಮೃತ 14 ನೇ ಆರೋಪಿಯೊಂದಿಗೆ ಸೇರಿಏಕೋದ್ದೇಶದಿಂದ ಚಾಸಾ–6 ರವರ ಜೊತೆ ಜಗಳ ಮಾಡಲು ಅಕ್ರಮ ಗುಂಪನ್ನು ಕಟ್ಟಿಕೊಂಡು ದೊಂಬಿಯನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 147 ಸಹವಾಚಕ 149 ರಂತೆ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಮೂರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ

ಆರೋಪಿಗಳಾದ ನೀವು 6 ಮತ್ತು ಮೃತ 14ನೇ ಆರೋಪಿಯೊಂದಿಗೆ ಸೇರಿ ಏಕೋದ್ದೇಶದಿಂದ ಚಾಸಾ-6 ರವರ ಜೊತೆ ಜಗಳ ಮಾಡಲು ಅಕ್ರಮ ಗುಂಪನ್ನು ಕಟ್ಟಿಕೊಂಡು ಕೈಯಲ್ಲಿ ಹಾರೆ, ಸುತ್ತಿಗೆ, ಕಲ್ಲುಗಳನ್ನು ಹಿಡಿದುಕೊಂಡು ದೊಂಬಿಯನ್ನುಂಟು ಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 148 ಸಹವಾಚಕ 149 ರಂತೆ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ನಾಲ್ಕನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು 6 ಮತ್ತು ಮೃತ 14ನೇ ಆರೋಪಿಯೊಂದಿಗೆ ಸೇರಿ ಏಕೋದ್ದೇಶದಿಂದ ಅಕ್ರಮಕೂಟ ಸೇರಿ ಚಾಸಾ-6 ರವರನ್ನು ಉದ್ದೇಶಿಸಿ "ಬೋಳಿ ಮಗನೆ, ಸೂಳೆ ಮಗನೆ" ಎಂದು ಅವಾಚ್ಯ ಶಬ್ಧಗಳಿಂದ ಬೈದಿದ್ದಲ್ಲದೆ, ಚಾಸಾ-1-ಶ್ರೀ.ಹರೀಶ, ಪೊಲೀಸ್ ಸಿಬ್ಬಂದಿ ತಮ್ಮ ಮೊಬೈಲ್ ನಲ್ಲಿ ಗಲಾಟೆಯನ್ನು ಚಿತ್ರಿಕರಿಸಿಕೊಳ್ಳುತ್ತಿದ್ದಾಗ ಆರೋಪಿಗಳಾದ ನೀವು ಚಾಸಾ-1 ರವರನ್ನು ಉದ್ದೇಶಿಸಿ "ಏಕೆ ವಿಡಿಯೋ ಮಾಡುತ್ತಿದ್ದೀಯಾ ಬೋಳಿ ಮಗನೆ, ಸೂಳೆ ಮಗನೆ" ಎಂದು ಅವಾಚ್ಯ ಶಬ್ದಗಳಿಂದ ಬೈದು, ಆ ಮೂಲಕ ಚಾಸಾ-6 ಮತ್ತು ಚಾಸಾ-1 ರವರಿಗೆ ಉದ್ರೇಕವನ್ನುಂಟು ಮಾಡಿದರೆ ಅಂತಹ ಉದ್ರೇಕದಿಂದ ಅವರು ಕುಪಿತರಾಗಿ ಶಾಂತಿಭಂಗವನ್ನುಂಟು ಮಾಡಲೆಂಬ ಅಥವಾ ಯಾವುದೇ ಅಪರಾಧವನ್ನು ಮಾಡಬೇಕೆಂಬ ಉದ್ದೇಶದಿಂದ ಅವರನ್ನು ಅವಮಾನಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಐದನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು 6 ಮತ್ತು ಮೃತ 14ನೇ ಆರೋಪಿಯೊಂದಿಗೆ ಸೇರಿ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಚಾಸಾ-6 ರವರ ಜೊತೆ ಜಗಳ ತೆಗೆದು, ಆರೋಪಿಗಳ ಪೈಕಿ 11ನೇ ಆರೋಪಿಯಾದ ನೀವು ಚಾಸಾ-6 ರವರನ್ನು ಗುರಿಯಾಗಿಸಿಕೊಂಡು "ಏನು ಬಂದರು ನಾನು ನೋಡಿಕೊಳ್ಳುತ್ತೇನೆ. ಅಂಗಡಿ ಮಳಿಗೆಯನ್ನು ಹೊಡೆದು ಹಾಕಿ" ಎಂದು ಉಳಿದ ಆರೋಪಿಗಳಿಗೆ ಅಪರಾಧಿಕ ಕೃತ್ಯವೆಸಗಲು ಕುಮ್ಮಕ್ಕು ನೀಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 114 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಆರನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು 6 ಮತ್ತು ಮೃತ 14ನೇ ಆರೋಪಿಯೊಂದಿಗೆ ಸೇರಿ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಸುತ್ತಿಗೆ ಮತ್ತು ಹಾರೆಗಳಿಂದ ಚಾಸಾ-6 ರವರ

ಅಂಗಡಿಯ ಬಾಗಿಲನ್ನು ಒಡೆದು ಹಾಕಿ, ಮೆಟ್ಟಿಲುಗಳನ್ನು ಒಡೆದು ಬೀಗ ಮತ್ತು ಸಿಸಿ ಕ್ಯಾಮರಾ ಹಾಗು ವಿಧ್ಯುತ್ ಮೀಟರ್ ಬೋರ್ಡ್‌ನ್ನು ಉದ್ದೇಶಪೂರ್ವಕವಾಗಿ ಒಡೆದು ಹಾಕಿ ಚಾಸಾ-6 ರವರಿಗೆ ಸುಮಾರು ರೂ.10,000/- ನಷ್ಟ ಉಂಟುಮಾಡಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 427 ಸಹವಾಚಕ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞತೆಯಲ್ಲಿ ಎಸಗಿರುತ್ತೀರೆಂದು ನಿಮ್ಮ ಮೇಲೆ ಆಪಾದಿಸಲಾಗಿದೆ.

ಕೊನೆಯದಾಗಿ, ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು 6 ಮತ್ತು ಮೃತ 14 ನೇ ಆರೋಪಿಯೊಂದಿಗೆ ಸೇರಿ ಏಕೋದ್ದೇಶದಿಂದ ಅಕ್ರಮಕೂಟ ಕಟ್ಟಿಕೊಂಡು ಚಾಸಾ-6 ರವರ ಜೊತೆ ಜಗಳ ಮಾಡುತ್ತಿದ್ದಾಗ, ಚಾಸಾ-1-ಶ್ರೀ.ಹರೀಶ, ಪೊಲೀಸ್ ಸಿಬ್ಬಂದಿ ತಮ್ಮ ಮೊಬೈಲ್ ನಲ್ಲಿ ಗಲಾಟೆಯನ್ನು ಚಿತ್ರಿಕರಿಸಿಕೊಳ್ಳುತ್ತಿದ್ದಾಗ ಆರೋಪಿಗಳಾದ ನೀವು ಚಾಸಾ-1 ರವರು ತಮ್ಮ ಲೋಕನೌಕರನ ಕರ್ತವ್ಯ ನಿರ್ವಹಣೆಯನ್ನು ಮಾಡಲು ಬಿಡದೆ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದು, ಆ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 353 ಸಹವಾಚಕ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುವಿರಿ.

ಪ್ರಶ್ನೆ:1- ಈ ಮೇಲೆ ಹೇಳಿದಂತೆ ನಿಮಗೆ ಓದಿ ಹೇಳಿ ವಿವರಿಸಿದ ದೋಷಾರೋಪಣೆಯನ್ನು ಅರ್ಥಮಾಡಿಕೊಂಡಿರುವಿರಾ?

1 ರಿಂದ 5, 7 ರಿಂದ 13 ಮತ್ತು 15 ನೇ ಆರೋಪಿಗಳ ಉತ್ತರಃ

ಪ್ರಶ್ನೆ:2- ಸದರಿ ಆರೋಪಣೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೋ?

1 ರಿಂದ 5, 7 ರಿಂದ 13 ಮತ್ತು15 ನೇ ಆರೋಪಿಗಳ ಉತ್ತರಃ

(ಆರೋಪಿಗಳಿಗೆ ತಿಳಿದಿರುವ ಕನ್ನಡ ಭಾಷೆಯಲ್ಲಿ ಈ ದೋಷಾರೋಪಣೆಯನ್ನು ಓದಿ ತಿಳಿಸಿ ಹೇಳಲಾಗಿ ಸದರಿ ಆರೋಪಿಗಳು ಹೇಳಿದ ಉತ್ತರಗಳನ್ನು ಯಥಾವತ್ತಾಗಿ ಬರೆದುಕೊಳ್ಳಲಾಯಿತ್ತೆಂದು ದೃಢೀಕರಿಸಿರುತ್ತೇನೆ.)

ದಿನಾಂಕಃ 17.11.2025.

(ಸತೀಶ. ಕೆ.ಜಿ.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ನಂಜನಗೂಡು.